ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ
**KARNATAK UNIVERSITY DHARWAD**
ಪರೀಕ್ಷಾ ವಿಭಾಗ
ಗೌಪ್ಯ ಶಾಖೆ, 2ನೇ ಮಹಡಿ, ಪರೀಕ್ಷಾ ಭವನ
**EXAMINATION SECTION**
Confidential Branch, 2nd Floor, Examination Bhavan

Azadi Ka Amrit Mahotsav

Website: www.kud.ac.in
e-mail: confidential@kud.ac.in
☎: (0836) 2215259

ನಂ.ಕವಿವಿ/ಪರೀಕ್ಷಾ-ಗೌಪ್ಯ/2024/23 ದಿನಾಂಕ : 2/5/2024

## ಸುತ್ತೋಲೆ

**ವಿಷಯ:- ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ ಜುಲೈ/ಅಗಸ್ಟ್-2024ರಲ್ಲಿ ಜರುಗಲಿರುವ ಸ್ನಾತಕ ಪದವಿಗಳ 2, 4 ಮತ್ತು 6ನೇ ಸೆಮಿಸ್ಟರ್ ಪರೀಕ್ಷಾ ಪೂರ್ವ ತಯಾರಿ ಕುರಿತು.**

** **

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ತಿಳಿಯಪಡಿಸುವುದೇನೆಂದರೆ, ಸನ್ 2023-24ನೇ ಸಾಲಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ ಪ್ರವೇಶ ಪಡೆದುಕೊಂಡು ಎಲ್ಲ ಸ್ನಾತಕ ಪದವಿಗಳ 2, 4 & 6ನೇ ಸೆಮಿಸ್ಟರ್ ಪರೀಕ್ಷಾ ಪೂರ್ವ ಸಿದ್ದತೆಯನ್ನು ಈ ಕೆಳಗಿನಂತೆ ಮಾಡಿಕೊಳ್ಳಲು ಸಂಬಂಧಪಟ್ಟ ಪ್ರಾಚಾರ್ಯರು ತಕ್ಷಣ ಕ್ರಮ ಕೈಗೊಳ್ಳುವುದು.

1. 2023-24 ರಲ್ಲಿ 1, 3 ಮತ್ತು 5ನೇ ಸೆಮಿಸ್ಟರ್ ಪದವಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು Download ಮಾಡಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು ಪ್ರವೇಶ ಪತ್ರದ ಪ್ರಕ್ರಿಯೆ ಹಿಂಬಾಕಿ ಇದ್ದಲ್ಲಿ ಸದರ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.
2. ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ 2023-24ರಲ್ಲಿ 1ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 2ನೇ ಸೆಮಿಸ್ಟರ್ ತರಗತಿಗೆ, ಹಾಗೂ 3ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 4ನೇ ಸೆಮಿಸ್ಟರ್ ತರಗತಿಗೆ, 5ನೇ ಸೆಮಿಸ್ಟರ್ ವಿದ್ಯಾರ್ಥಿಗಳನ್ನು 6ನೇ ಸೆಮಿಸ್ಟರ್ ತರಗತಿಗೆ ಬೆಸ ಸೆಮೆಸ್ಟರ್‌ಗಳಲ್ಲಿ ಶೇಕಡಾ 75% ರಷ್ಟು ಹಾಜರಾತಿ ಪೂರೈಸಿದವರು ಮತ್ತು ಪರೀಕ್ಷಾ ಅರ್ಜಿ ತುಂಬಿದ ವಿದ್ಯಾರ್ಥಿಗಳನ್ನು ಆಯಾ ಮಹಾವಿದ್ಯಾಲಯದ ಪ್ರಾಚಾರ್ಯರು UUCMS ತಂತ್ರಾಂಶದ ಮುಖಾಂತರ Promote ಮಾಡುವುದು. ಸದರಿ ಪ್ರಕ್ರಿಯೆಯನ್ನು 02.05.2024ರಿಂದ ಪ್ರಾರಂಭಿಸಿ 09.05.2024 ರೊಳಗಾಗಿ ಮುಕ್ತಾಯಗೊಳಿಸುವುದು.
3. Promote ಗೊಂಡ ವಿದ್ಯಾರ್ಥಿಗಳು UUCMS ತಂತ್ರಾಂಶದ ಮುಖಾಂತರ ಕೋರ್ಸು ನೊಂದಣಿ ಮಾಡಿಕೊಳ್ಳುವುದು ಹಾಗೂ ದಿನಾಂಕ: 13.05.2024ರ ಒಳಗೆ ಪ್ರಕ್ರಿಯೆಯನ್ನು ಪೂರ್ಣಗೊಳಿಸುವುದು.
4. ಕೋರ್ಸ ನೊಂದಣಿಗೊಂಡ ವಿದ್ಯಾರ್ಥಿಗಳನ್ನು ಪ್ರಾಚಾರ್ಯರು UUCMS ತಂತ್ರಾಂಶದ ಮುಖಾಂತರ ಅನುಮೋದನೆಗೊಳಿಸುವುದು. ಸದರಿ ಪ್ರಕ್ರಿಯೆಯನ್ನು ದಿನಾಂಕ: 15.05.2024ರ ಒಳಗೆ ಪೂರ್ಣಗೊಳಿಸುವುದು.
5. ಕೋರ್ಸ ನೊಂದಣಿಗೊಂಡ ಹಾಗೂ ಪ್ರಾಚಾರ್ಯರರಿಂದ UUCMS ತಂತ್ರಾಂಶದ ಮುಖಾಂತರ ಅನುಮೋದನೆಗೊಂಡ ವಿದ್ಯಾರ್ಥಿಗಳು 2, 4 & 6ನೇ ಸೆಮಿಸ್ಟರಗೆ ಪರೀಕ್ಷಾ ಅರ್ಜಿಯನ್ನು UUCMS ತಂತ್ರಾಂಶದ ಮುಖಾಂತರ ಭರ್ತಿ ಮಾಡುವುದು.
6. ಪರೀಕ್ಷಾ ಶುಲ್ಕ ಹಾಗೂ ಮತ್ತಿತರ ಪ್ರಕ್ರಿಯೆಗಳ ಬಗ್ಗೆ ಕ.ವಿ.ವಿ.ಯು ಸುತ್ತೋಲೆಯ ಮೂಲಕ ಶೀಘ್ರದಲ್ಲಿ ಪ್ರಕಟಿಸಲಾಗುವುದು. ಆದಾಗ್ಯೂ, ಅರ್ಜಿಯನ್ನು ದಿನಾಂಕ: 16.05.2024 ರಿಂದ ಪ್ರಾರಂಭಿಸಿ ದಿನಾಂಕ: 31.05.2024ರ ಒಳಗೆ ಪೂರ್ಣಗೊಳಿಸುವುದೆಂದು ತಾತ್ಕಾಲಿಕವಾಗಿ ನಿರ್ಧರಿಸಲಾಗಿದೆ.
7. UUCMS ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಹಾಜರಾತಿಯನ್ನು ನಮೂದಿಸುವ ಪ್ರಕ್ರಿಯೆಯನ್ನು ದಿನಾಂಕ: 01.07.2024ರ ಒಳಗೆ ಪೂರ್ಣಗೊಳಿಸುವುದು.
8. ರಾಷ್ಟ್ರೀಯ ಶಿಕ್ಷಣ ನೀತಿ (NEP) ಅಡಿಯಲ್ಲಿ 2, 4 ಮತ್ತು 6ನೇ ಸೆಮಿಸ್ಟರ್ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಿದ ಹಾಗೂ ಶೇಕಡಾ 75% ರಷ್ಟು ಹಾಜರಾತಿ ಪೂರೈಸಿದ ವಿದ್ಯಾರ್ಥಿಗಳು ಪ್ರವೇಶ ಪತ್ರವನ್ನು ದಿನಾಂಕ: 03.07.2024ರ ಒಳಗೆ Download ಮಾಡಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವುದು. ಪ್ರವೇಶ ಪತ್ರದ ಪ್ರಕ್ರಿಯೆ ಹಿಂಬಾಕಿ ಇದ್ದಲ್ಲಿ ಸದರ ಪ್ರಕ್ರಿಯೆಯನ್ನು ನಿಗದಿಪಡಿಸಿದ ದಿನಾಂಕದೊಳಗಾಗಿ ಪೂರ್ಣಗೊಳಿಸುವುದು.
9. ದಿನಾಂಕ: 04.07.2024ರ ಒಳಗೆ ಪ್ರಾಯೋಗಿಕ ಬ್ಯಾಚ್‌ಗಳನ್ನು UUCMS ತಂತ್ರಾಂಶದ ಮುಖಾಂತರ ರಚಿಸುವುದು.
10. ದಿನಾಂಕ:06.07.2024 ರಿಂದ ದಿನಾಂಕ: 16.07.2024ರ ಮಧ್ಯದಲ್ಲಿ ಪ್ರತಿ ಬ್ಯಾಚಿಗೆ ಕನಿಷ್ಟ 15 ವಿದ್ಯಾರ್ಥಿಗಳು ಅವಶ್ಯವಿದ್ದಲ್ಲಿ 20 ವಿದ್ಯಾರ್ಥಿಗಳ ಬ್ಯಾಚಗಳನ್ನು ರಚಿಸಿಕೊಂಡು ಪ್ರಾಯೋಗಿಕ ಪರೀಕ್ಷೆಗಳನ್ನು ಜರುಗಿಸಿ ಪ್ರತಿ ದಿನದ ಪ್ರಾಯೋಗಿಕ ಅಂಕಗಳನ್ನು ಸದರಿ ದಿನದಂದು ತಪ್ಪದೇ ನಮೂದಿಸುವುದು.

---2

11. ಮುಖ್ಯ ಪ್ರಾಯೋಗಿಕ ಪರೀಕ್ಷೆಗಳು ಮುಗಿದ ಕೂಡಲೇ ಈ ಮೇಲಿನಂತೆ ಬ್ಯಾಚ್‌ಗಳನ್ನು ರಚಿಸಿ **Internship/Project work/Field work** ಗಳ ಪರೀಕ್ಷೆಗಳನ್ನು ಜರುಗಿಸುವುದು. ಆದಾಗ್ಯೂ ಈಗಾಗಲೇ ಪ್ರಕಟಗೊಂಡ ಲಿಖಿತ ಪರೀಕ್ಷೆಗಳ ವೇಳಾಪಟ್ಟಿಗೂ ಮೊದಲು ದಿನಾಂಕ: 18.07.2024 ಈ ಎಲ್ಲಾ ಪ್ರಕ್ರಿಯೆಗಳನ್ನು ತಪ್ಪದೇ ಜರುಗಿಸುವುದು.

12. ಸದರಿ **Internship/Project work/Field work** ಗಳ ಪರೀಕ್ಷೆಗಳು **Non-Practical/Degrees**ಗಳಿಗೂ ಅನ್ವಯಿಸುತ್ತದೆ.

ಕುಲಸಚಿವರು(ಮೌಲ್ಯಮಾಪನ)

ಗೆ,
ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು.

ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:
1. ಡಾ. ಶಿವಶಂಕರ ಎಸ್.ನಿರ್ದೇಶಕರು, ಯುಯುಸಿಎಮ್‌ಎಸ್ ಘಟಕ, ಕ.ವಿ.ವಿ. ಧಾರವಾಡ.
2. ಸಿಸ್ಟಮ್‌ಅನಾಲಿಸ್ಟ, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
3. ಉಪಕುಲಸಚಿವರು/ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕ.ವಿ.ವಿ. ಧಾರವಾಡ.
4. ಕುಲಪತಿಗಳು/ಕುಲಸಚಿವರು/ಕುಲಸಚಿವರು(ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ. ಧಾರವಾಡ.
5. ನಿರ್ದೇಶಕರು, ಐಟಿ ವಿಭಾಗ, ಕ.ವಿ.ವಿ. ಸದರ ಸುತ್ತೋಲೆಯನ್ನು ಕ.ವಿ.ವಿ. ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.